ಶ್ರೀ ಭೀಮಣ್ಣ ಖಂಡ್ರೆ:– ಸದನದಲ್ಲಿ ಈಗ ನಗರಾಭಿವೃದ್ಧಿ ಮಂತ್ರಿಗಳು ಇಲ್ಲ. ಅವರು ಕೊಟ್ಟ ಹೇಳಿಕೆಯನ್ನು ಮಾನ್ಯ ಕಾರ್ಮಿಕ ಸಚಿವರು ಓದಿದರು.

ಶ್ರೀ ಕೆ.ಹೆಚ್. ಹನುಮೇಗೌಡ:– ಅಧ್ಯಕ್ಷರೆ, ನಾವು ಪ್ರಶ್ನೆ ಕೇಳುವಾಗ ಅವರುಗಳು ಗಲಾಟೆ ಮಾಡುತ್ತಾರೆ, ಆದ್ದರಿಂದ ಮುಂದೆ ಶ್ರೀ ವಾಟಾಳ್ ನಾಗರಾಜ್‌ರವರು ಏನಾದರೂ ಪ್ರಶ್ನೆ ಕೇಳುವಾಗ ನಮಗೆ ಗಲಾಟೆ ಮಾಡಲು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರೆ ಖಾಸಗಿಯವರಿಗೆ ಮುನಿಸಿಪಾಲಿಟಿಯವರು ಸೈಟುಗಳನ್ನು ಮಂಜೂರು ಮಾಡುವಾಗ ಕಾನೂನಿನ ಪ್ರಕಾರ ಏನು ಕ್ರಮವನ್ನು ಅನುಸರಿಸಬೇಕು ಎನ್ನುವ ಬಗ್ಗೆ ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಭೀಮಣ್ಣ ಖಂಡ್ರೆ:– ಅವರು ಒಂದು ಪ್ರಶ್ನೆಯನ್ನು ಕೇಳಿದ್ದಾರೆ ಅದಕ್ಕೆ ಉತ್ತರವನ್ನು ಮಂತ್ರಿಗಳು ಕೊಟ್ಟಿದ್ದಾರೆ. ಅವರು ಈಗ ಬೇರೆ ವಿಶೇಷವಾಗಿ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಆದ್ದರಿಂದ ಅದರ ಬಗ್ಗೆ ಮೊದಲು ನೋಟೀಸ್ ಕೊಡಬೇಕು.

ಶ್ರೀ ಕೆ.ಹೆಚ್. ಹನುಮೇಗೌಡ:– ನಿಮಗೆ ಗೊತ್ತಿದ್ದರೆ ಹೇಳಿ, ಇಲ್ಲದಿದ್ದರೆ ಸುಮ್ಮನಿರಿ. ಸಾವಿರಾರು ಸೈಟುಗಳನ್ನು ಬೇರೆಯವರಿಗೆ ಮುನಿಸಿಪಾಲಿಟಿಯವರು ಕಾನೂನಿಗೆ ವಿರುದ್ಧವಾಗಿ ಪರಭಾರೆ ಮಾಡಿದ್ದಾರೆಂದು ನನ್ನ ಪ್ರಶ್ನೆ, ಇದರ ಬಗ್ಗೆ ನಿಮಗೆ ನೋಟೀಸ್ ಏಕೆ ಕೊಡಬೇಕು ?

ಶ್ರೀ ಭೀಮಣ್ಣ ಖಂಡ್ರೆ:– ಕಾಲಿಂಗ್ ಅಟೆನ್‌ಷೆನ್‌ನಲ್ಲಿ ಯಾವ ವಿಷಯವಿದೆ ಅದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಈಗ ತಾವು ಏನು ಹೇಳಿದ್ದೀರಿ ಅದರ ಬಗ್ಗೆ ಕೇಳಬೇಕಾದರೆ ನೋಟೀಸ್ ಕೊಡಬೇಕಾಗುತ್ತದೆ. ಇಲ್ಲದೇ ಇದ್ದರೆ, ಅಧ್ಯಕ್ಷರೆ ಅದನ್ನು ಮುಂದಕ್ಕೆ ಹಾಕಿ.

ಶ್ರೀ ಕೆ.ಹೆಚ್. ಹನುಮೇಗೌಡ:– ಹಾಗಾದರೆ ಮುಂದೆ ಹಾಕಿ, ಅವರು ಬಂದ ಮೇಲೆ ಇದಕ್ಕೆ ಉತ್ತರ ಹೇಳಿ.

ಶ್ರೀ ಆಂಜನಮೂರ್ತಿ:– ಮಾನ್ಯ ಅಧ್ಯಕ್ಷರೆ, ಸರ್ಕಾರಿ ಅನುಸೂಚಿತ ಜಾತಿ:ಪರಿಶಿಷ್ಟ ವರ್ಗದವರ ವಿದ್ಯಾರ್ಥಿನಿಲಯಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಡಿಗೆಯವರು ಮತ್ತು 'ಡಿ' ದರ್ಜೆಯ ಸಿಬ್ಬಂದಿಗೆ ಸಿಗುತ್ತಿರುವ ಸೌಲಭ್ಯಗಳು. ಮಾನ್ಯ ಸಮಾಜ ಕಲ್ಯಾಣ ಸಚಿವರ ಗಮನವನ್ನು ಸೆಳೆಯುತ್ತೇವೆ.

ಶ್ರೀ ಧರ್ಮಸಿಂಗ್:– (ಸಮಾಜ ಕಲ್ಯಾಣ ಸಚಿವರು) ಮಾನ್ಯ ಅಧ್ಯಕ್ಷರೆ, ಸಮಾಜ ಕಲ್ಯಾಣ ಇಲಾಖೆಯು, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಖಾಸಗಿ ಆಡಳಿತ ಸಂಸ್ಥೆಯವರು ನಡೆಸುವ ವಿದ್ಯಾರ್ಥಿ ನಿಲಯಗಳನ್ನು ಪ್ರೋತ್ಸಾಹಿಸಲು ಅನುದಾನವನ್ನು ಒದಗಿಸುತ್ತಿದೆ. ಈ ವಿದ್ಯಾರ್ಥಿನಿಲಯಗಳಲ್ಲಿರುವ ವಿದ್ಯಾರ್ಥಿಗಳಿಗೆ, ಸರ್ಕಾರಿ ವಿದ್ಯಾರ್ಥಿನಿಲಯಗಳಲ್ಲಿರುವ ವಿದ್ಯಾರ್ಥಿಗಳಿಗೆ ಸಮಾನವಾಗಿ ಭೋಜನ ವೆಚ್ಚವನ್ನು ಇಲಾಖೆಯು ನೀಡುತ್ತಿದೆ. ಸಿಬ್ಬಂದಿ ವೆಚ್ಚವನ್ನು ಸಂಬಂಧಪಟ್ಟ ಸಂಸ್ಥೆಗಳು ಭರಿಸಬೇಕಾಗಿದ್ದು, ಸರ್ಕಾರದ ವತಿಯಿಂದ ಪೂರಕ ಅನುದಾನವನ್ನು ಮಾತ್ರ ಸಿಬ್ಬಂದಿ ವೆಚ್ಚಕ್ಕಾಗಿ ನೀಡಲಾಗುತ್ತಿದೆ. ಸರ್ಕಾರದ ಆದೇಶದ ಸಂಖ್ಯೆ. ಎಸ್‌ಡಬ್ಲ್ಯುಡಿ 248 ಎಸ್‌ಬಿಸಿ 71, ದಿನಾಂಕ 20-12-1977ರ ಪ್ರಕಾರ ಅನುದಾನಿತ ವಿದ್ಯಾರ್ಥಿನಿಲಯಗಳಿಗೆ ನೀಡುವ ಸಿಬ್ಬಂದಿ ವೆಚ್ಚದ ವಿವರ ಕೆಳಕಂಡಂತಿದೆ.

1)	ಮೇಲ್ವಿಚಾರಕರಿಗೆ	ತಿಂಗಳಿಗೆ – ರೂ. 125
2)	ಅಡಿಗೆಯವರು	ತಿಂಗಳಿಗೆ – ರೂ. 100
3)	ಅಡಿಗೆ ಸಹಾಯಕರು	ತಿಂಗಳಿಗೆ – ರೂ. 75

ಸರ್ಕಾರ ಈ ದಿಸೆಯಲ್ಲಿ ರೂಪಿಸಿರುವ ನಿಯಮಾವಳಿಯ ನಿಯಮ 8ರಲ್ಲಿ ತಿಳಿಸಿರುವಂತೆ ಸರ್ಕಾರವು ಸಂಪೂರ್ಣ ಸಿಬ್ಬಂದಿ ವೆಚ್ಚವನ್ನು ಭರಿಸಲು ಬದ್ಧವಾಗಿರುವುದಿಲ್ಲ. ಸಂಬಂಧಪಟ್ಟ ಸ್ವಯಂಸೇವಾ ಸಂಸ್ಥೆಯು ಸಿಬ್ಬಂದಿ ವೆಚ್ಚಕ್ಕೆ ವಂತಿಗೆಯನ್ನು ನೀಡಬೇಕಾಗಿರುತ್ತದೆ.

† ಶ್ರೀ ಅಂಜನಮೂರ್ತಿ:– ಸನ್ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ಮೇಲ್ವಿಚಾರಕರಿಗೆ 125 ರೂಪಾಯಿ, ಅಡುಗೆಯವರಿಗೆ 100 ರೂ. ಅಡಿಗೆ ಸಹಾಯಕರುಗಳಿಗೆ 75 ರೂ.ಗಳನ್ನು ತಿಂಗಳಿಗೆ ಕೊಡುತ್ತಾರೆಂದು ತಿಳಿಸಿದ್ದಾರೆ. ಆದರೆ ಸರ್ಕಾರ ಘೋಷಿಸಿರುವ ಪ್ರಕಾರ ಕೃಷಿ ಕಾರ್ಮಿಕರಿಗೆ ಮತ್ತು ಯಾವುದೇ ರೀತಿಯ ಕಾರ್ಮಿಕರಿಗೆ ದಿನಕ್ಕೆ 16 ರೂಪಾಯಿಗಳನ್ನು ಕೂಲಿಯಾಗಿ ಕೊಡಬೇಕೆಂದು ಆದೇಶ ಇದೆ. ಆದರೆ, ಇವರಿಗೆ ಕೊಟ್ಟಿರುವ ಭತ್ಯೆಯನ್ನು ನೋಡಿದರೆ ದಿನಕ್ಕೆ 1–2 ರೂ. ಕೊಟ್ಟಂತೆ ಆಗುತ್ತದೆ. ಇಷ್ಟು ತಾರತಮ್ಯವಿರಬೇಕಾದರೆ ಈ ಅಡುಗೆಯವರು ಕೆಲಸ ಮಾಡುವುದಕ್ಕಾಗುವುದಿಲ್ಲ. ಇದರಿಂದ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. ಸರ್ಕಾರದ ವತಿಯಿಂದ ನಡೆಯುವ ವಿದ್ಯಾರ್ಥಿನಿಲಯಗಳಿಗೆ ನೀಡುವಂತೆ ಇವರಿಗೂ ನೀಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಮನೋಹರ್ ಐನಾಪುರ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ತಮ್ಮ ಉತ್ತರದಲ್ಲಿ ಈ ಹಾಸ್ಟೆಲ್‌ಗಳ ಮೇಲ್ವಿಚಾರಕರಿಗೆ 125 ರೂ. ಅಡಿಗೆಯವರಿಗೆ 100 ರೂ, ಮತ್ತು ಅಡಿಗೆ ಸಹಾಯಕರಿಗೆ 75ರೂ. ಕೊಡುತ್ತಿದ್ದೇವೆಂದು ಹೇಳಿದ್ದಾರೆ. ಅಂದರೆ ಇವರಿಗೆ ಪ್ರತಿಯೊಬ್ಬರಿಗೂ ಪ್ರತಿದಿನ 4.13 ರೂ. 3.33 ರೂ. 2.50 ರೂ. ಸಂಬಳ ಸಿಕ್ಕಿದಂತಾಗುತ್ತದೆ. ಅಂದರೆ ಇಷ್ಟು ಸಂಬಳದಲ್ಲಿ ಈ ಕೆಲಸಗಾರರು ತಮ್ಮ ಜೀವನ ನಡೆಸುವುದಕ್ಕೆ ಸಾಧ್ಯವೇ ? ತಮ್ಮ ಉತ್ತರದಲ್ಲಿ ಈ ವಿದ್ಯಾರ್ಥಿ ನಿಲಯಗಳಲ್ಲಿರತಕ್ಕ ವಿದ್ಯಾರ್ಥಿಗಳಿಗೆ ಸರ್ಕಾರಿ ವಿದ್ಯಾರ್ಥಿನಿಲಯಗಳಲ್ಲಿರತಕ್ಕ ವಿದ್ಯಾರ್ಥಿಗಳಿಗೆ ಸಮನಾಗಿ ಭೋಜನ ವೆಚ್ಚವನ್ನು ಇಲಾಖೆಯಿಂದ ನೀಡುತ್ತಿದ್ದೇವೆಂದು ಹೇಳಿದ್ದೀರಿ. ಆದರೆ ಈ ಕಾರ್ಮಿಕರಿಗೆ, ಅಡಿಗೆಯವರಿಗೆ, ಸಿಬ್ಬಂದಿ ವರ್ಗದವರಿಗೆ ಸರ್ಕಾರಿ ವಿದ್ಯಾರ್ಥಿ ನಿಲಯಗಳಲ್ಲಿ ಸರ್ಕಾರದ ಕಾನೂನು ಪ್ರಕಾರ 1500 ರೂ. 2000 ರೂಪಾಯಿಗಳ ಸಂಬಳ ಕೊಡುತ್ತಿದ್ದೀರಿ. ಅದೇ ರೀತಿ ಪ್ರೈವೇಟ್ ಮ್ಯಾನೇಜ್‌ಮೆಂಟ್ ವಿದ್ಯಾರ್ಥಿನಿಲಯಗಳಲ್ಲಿರುವವರಿಗೂ ಏತಕ್ಕೆ ಕೊಡಬಾರದು ? ಹೈಸ್ಕೂಲ್‌ನಲ್ಲೇ ಎಸ್.ಸಿ. ಎಸ್.ಟಿ;ಮ್ಯಾನೇಜ್‌ಮೆಂಟ್ ಆಗಲಿ ಬೇರೆಯವರ ಮ್ಯಾನೇಜ್‌ಮೆಂಟ್ ಆಗಲಿ ಎಲ್ಲಾ ಸಿಬ್ಬಂದಿವರ್ಗದ ಸಂಬಳಗಳೂ ಒಂದೇ ರೀತಿ ಇರುತ್ತವೆ. ಆದರೆ ಇಲ್ಲಿ ಪ್ರೈವೇಟ್‌ನವರಿಗೇ ಒಂದು ರೀತಿ, ಸರ್ಕಾರಿ ಹಾಸ್ಟೆಲ್‌ನಲ್ಲಿರುವವರಿಗೇ ಒಂದು ರೀತಿ ಇದೆ. ಪ್ರೈವೇಟ್ ಮ್ಯಾನೇಜ್‌ಮೆಂಟ್‌ನವರು ನಡೆಸುತ್ತಿರುವ ಹಾಸ್ಟೆಲ್‌ಗಳಲ್ಲಿ 125, ರೂ. 100 ರೂ. 75 ರೂ. ಕೊಡುತ್ತಿರುವುದು ಅಸಹ್ಯವಾದುದು. ಎಸ್.ಸಿ. ಹಾಸ್ಟೆಲ್‌ಗಳಿಗೆ ಏತಕ್ಕೆ ನೀವು ಈ ರೀತಿ ರೂಲ್ ಮಾಡುತ್ತೀರಿ ? ಒಂದು ದಿವಸಕ್ಕೆ 4.13 ರೂ. ಕೂಲಿ ಕೊಡುತ್ತಿದ್ದೀರಿ. ಆದರೆ ಅದೇ ರಸ್ತೆಗೆ ಮಣ್ಣು ಹಾಕುವ ಕೆಲಸ ಮಾಡುವವನಿಗೆ 30–40 ರೂ. ಕೂಲಿಯನ್ನು ಒಂದು ದಿವಸಕ್ಕೆ ಕೊಡುತ್ತೀರಿ. ಆದ್ದರಿಂದ ಒಬ್ಬ ಮನುಷ್ಯ ಜೀವನ ಮಾಡುವುದಕ್ಕೆ ಅವಶ್ಯಕ ಇರುವಷ್ಟು ಸಂಬಳವನ್ನಾದರೂ ಕೊಡುವ ವ್ಯವಸ್ಥೆ ಮಾಡುತ್ತೀರಾ ಎಂದು ಕೇಳಬಯಸುತ್ತೇನೆ.

ಶ್ರೀ ಅಂಜನಮೂರ್ತಿ:– ಏಡೆಡ್ ಸ್ಕೂಲ್‌ಗಳಿಗೆ ಸರ್ಕಾರಿ ಸಂಬಳವನ್ನು ನಿಗದಿ ಮಾಡಿದೆ, ಅದೇ ರೀತಿ ಏಡೆಡ್ ಹಾಸ್ಟೆಲ್ ಸಿಬ್ಬಂದಿ ವರ್ಗದವರಿಗೂ ಸರ್ಕಾರಿ ವೇತನವನ್ನು ನಿಗದಿ ಮಾಡಬೇಕೆಂದು ಕೋರುತ್ತೇನೆ.

ಶ್ರೀ ಧರ್ಮಸಿಂಗ್:– 2–10–72ರ ಗ್ರಾಂಟ್ ಇನ್ ಏಡ್ ರೂಲ್ಸ್ ಪ್ರಕಾರ ನಾವು ಕೊಡುತ್ತಿದ್ದೇವೆ. ಅನುದಾನಿತ ಹಾಸ್ಟೆಲ್‌ಗಳಿಗೂ ಅಷ್ಟೇ ಕೊಡುತ್ತಿದ್ದೇವೆ. ಸರ್ಕಾರಿ ಹಾಸ್ಟೆಲ್‌ಗಳಲ್ಲಿ ಕೆಲಸ ಮಾಡುವವರಿಗೂ, ಪ್ರೈವೇಟ್ ಹಾಸ್ಟೆಲ್‌ಗಳಲ್ಲಿ ಕೆಲಸ ಮಾಡುವವರಿಗೂ ತಾರತಮ್ಯ ಇದೆ. ಗ್ರಾಂಟ್ ಇನ್ ಏಡ್ ಹಾಸ್ಟೆಲ್ ಆದರೂ ಅದರಲ್ಲಿ ಮ್ಯಾನೇಜ್‌ಮೆಂಟ್‌ನವರ ಕಾಂಟ್ರಿಬ್ಯೂಷನ್ ಇರಬೇಕು.

ರೂ ಕೂಡ ತಮ್ಮ ಸಿಬ್ಬಂದಿ ವರ್ಗಕ್ಕೆ ಖರ್ಚು ಮಾಡಬೇಕೆಂದು ಉದ್ದೇಶ ಇದೆ. ಅವರಿಗೆ 10 ರೂ.ಗಳನ್ನು ಸರ್ಕಾರದಿಂದ ಕೊಡುತ್ತಿದ್ದೇವೆ. ಸುಮಾರು 293ಗ್ರಾಂಟ್ ಇನ್ ಏಡ್ ಹಾಸ್ಟೆಲ್‌ಗಳು ಇವೆ ಅವುಗಳಿಗೆ 1.19 ಕೋಟಿ ರೂ. ವೆಚ್ಚವಾಗುತ್ತಿದೆ. ನಾವು ಕೊಡುತ್ತಿರುವುದು ಏಕಾಗುವುದಿಲ್ಲವೆಂದು ನನಗೆ ಗೊತ್ತು. ಆದರೆ ಈ ಸಂಸ್ಥೆಯವರು ಮುಂದೆ ಬಂದು ಕೆಲಸ ಮಾಡುತ್ತಿರುವುದರಿಂದ ಅವರ ಕಾಂಟ್ರಿಬ್ಯೂಷನ್ ಕೂಡ ಇಲ್ಲಿ ಇರಬೇಕು. ಆದರೂ ಎಸ್.ಸಿ.ಗಳಿಗೆ ಸಂಬಂಧಪಟ್ಟ ಹಾಸ್ಟೆಲ್‌ಗಳಿಗೆ ಸಹಾಯವನ್ನು ಸರ್ಕಾರ ಕೊಡಬೇಕಾಗಿದೆ. ಇದು ನಿಗದಿ ಮಾಡಿರತಕ್ಕದ್ದು. ಅದನ್ನು ಪರಿಶೀಲಿಸಬೇಕೆಂಬುದು ಅವರ ಭಾವನೆ ಆಗಿದೆ. ಬೇರೆ ಬೇರೆ ವಿದ್ಯಾ ಸಂಸ್ಥೆಗಳಲ್ಲಿ ಕೆಲಸ ಮಾಡುವವರಿಗೆ ಸರ್ಕಾರ ಸಂಬಳವನ್ನು ಕೊಡುತ್ತಿದೆ, ಇವರಿಗೂ ಏತಕ್ಕೆ ಕೊಡುವುದಿಲ್ಲ ಎನ್ನತಕ್ಕ ವಾದ ಇದೆ, ಬೋರ್ಡಿಂಗ್ ವೆಚ್ಚವನ್ನು ನಾವು ಸಂಪೂರ್ಣವಾಗಿ ಕೊಡುತ್ತಿದ್ದೇವೆ. ಇತ್ತೀಚೆಗೆ ನಾವು 100 ರೂ. ಇನ್‌ಕ್ರೀಸ್ ಮಾಡಿದ್ದೇವೆ. ಇದಕ್ಕಾಗಿ 12.90 ಕೋಟಿ ರೂ. ವೆಚ್ಚ ಸರ್ಕಾರಕ್ಕೆ ಬರುತ್ತಿದೆ. ಇದನ್ನು ಪೂರ್ತಿಯಾಗಿ ನಾವು ಕೊಡುತ್ತಿದ್ದೇವೆ. ಭೋಜನದ ವೆಚ್ಚವನ್ನು ನಾವು ಕೊಡುತ್ತಿರುವುದರಿಂದ ಸಿಬ್ಬಂದಿ ವೆಚ್ಚವನ್ನು ಅವರು ಖರ್ಚು ಮಾಡಬೇಕಾಗುತ್ತದೆ.

ಶ್ರೀ ಅಂಜನಮೂರ್ತಿ:– ಮಾನ್ಯ ಅಧ್ಯಕ್ಷರೆ, ಈ ವಿದ್ಯಾಸಂಸ್ಥೆಗಳು ಟಾಟಾ ಬಿರ್ಲಾಗಳಿಂದ ನಡೆಯುತ್ತಿಲ್ಲ. ಮ್ಯಾನೇಜ್‌ಮೆಂಟ್‌ನವರು ಕಾಂಟ್ರಿಬ್ಯೂಷನ್‌ನ್ನು ಹಾಕಿಕೊಳ್ಳಬೇಕೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಆದರೆ ಇದನ್ನು ನಾವು ಯಾವ ರೀತಿ ಕಾಂಟ್ರಿಬ್ಯೂಷನ್ ಹಾಕಿಕೊಳ್ಳಬೇಕು ? ಅರ್ಥವಾಗುತ್ತಿಲ್ಲ. ಈ ಹಾಸ್ಟೆಲ್‌ಗಳನ್ನು ಪರಿಶಿಷ್ಟ ಜಾತಿಯವರು ನಡೆಸುತ್ತಿದ್ದಾರೆ.....

† ಶ್ರೀ ಧರ್ಮಸಿಂಗ್:– ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ಎಸ್.ಸಿ; ಎಸ್.ಟಿ; ಗಳಿಗೆ ಸಂಬಂಧಪಟ್ಟಂತೆ 744 ಹಾಸ್ಟೆಲ್‌ಗಳನ್ನು ನಡೆಸುತ್ತಿದ್ದೇವೆ. 294 ಖಾಸಗಿ ಹಾಸ್ಟೆಲ್‌ಗಳಿವೆ. ಸರ್ಕಾರಕ್ಕೆ ಸಹಾಯವಾಗಲಿ ಎಂಬ ಉದ್ದೇಶದಿಂದ ಈ ಸಂಸ್ಥೆಗಳು ಕೆಲಸ ಮಾಡುತ್ತಿವೆ. ಈ ಸಂಸ್ಥೆಯನ್ನು ಪ್ರಾರಂಭ ಮಾಡುವಾಗ ಗ್ರಾಂಟ್ ಇನ್ ಏಡ್ ರೂಲ್ಸ್‌ನಲ್ಲಿ ನಾವು ನಮೂದು ಮಾಡಿದ್ದೇವೆ. 77 ರ ಪ್ರಕಾರ ಸಿಬ್ಬಂದಿ ವೆಚ್ಚ ಏನಿದೆ ಅದನ್ನು ಮ್ಯಾನೇಜ್‌ಮೆಂಟಿನವರೇ ಖರ್ಚು ಮಾಡಬೇಕೆಂದಿದೆ. ಅದನ್ನು ತಾವು ಒಪ್ಪಿಕೊಂಡೇ ಈ ಸಂಸ್ಥೆಯನ್ನು ಪ್ರಾರಂಭ ಮಾಡಿದ್ದೀರಿ. ಆದರೂ ಎಸ್.ಸಿ. ಎಸ್.ಟಿ; ಜನರಿಗೋಸ್ಕರ ಆಸಕ್ತಿವಹಿಸಿ ಕೆಲಸ ಮಾಡುವಂಥ ಸಂಸ್ಥೆಗಳಿಗೆ ಸಹಾಯ ಮಾಡುವ ವಿಚಾರವನ್ನು ಸರ್ಕಾರ ಪರಿಶೀಲಿಸುತ್ತದೆಂದು ಹೇಳಬಯಸುತ್ತೇನೆ.

ಶ್ರೀ ಅಂಜನಮೂರ್ತಿ:– ದಯವಿಟ್ಟು ತಾವು ಕಾಲಾವಕಾಶ ಮಾಡಿಕೊಡಬೇಕು. ಈ ಸಂಸ್ಥೆಗಳನ್ನು ನಡೆಸುತ್ತಿರುವವರು ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರು. ನಾನು ಮೊದಲೇ ಹೇಳಿದ್ದೇನೆ ಟಾಟಾ ಬಿರ್ಲಾರವರು ಯಾರೂ ಇವುಗಳನ್ನು ನಡೆಸುತ್ತಿಲ್ಲ. ಅವರು ಯಾವ ಆದಾಯದ ಮೇಲೆ ಕಾಂಟ್ರಿಬ್ಯೂಷನ್ ಹಾಕಿಕೊಳ್ಳಬೇಕೆಂದು ಹೇಳುತ್ತಿದ್ದೀರಿ ? ಇವರು ಹೇಳುತ್ತಿರುವುದು ಸರ್ಕಾರದ ಅಜ್ಞೆ 1977ನೇ ಇಸವಿಯದು. ಈಗಾಗಲೇ 1992-93ನೇ ಇಸವಿ ನಡೆಯುತ್ತಿದೆ. ಇವರು ಹೇಳುತ್ತಿರುವುದು 20 ವರ್ಷಗಳ ಹಿಂದಿನದು. ನೀವು ಅದೇ ಪಟ್ಟಿಯನ್ನು ಹಿಡಿದುಕೊಂಡು ಕುಳಿತರೆ ಇವತ್ತು ಕಡಿಮೆ ಸಂಬಳವನ್ನು ಪಡೆಯುತ್ತಿರುವಂಥ ಸಿಬ್ಬಂದಿ ವರ್ಗದವರು, ಮುಕ್ಕಳಿಗೆ ಕೊಡತಕ್ಕಂಥ ಆಹಾರವನ್ನು ಮತ್ತೊಂದು ಮಗುದೊಂದು ತೆಗೆದುಕೊಂಡು ಹೋಗುತ್ತಾರೆ. ಆವಾಗ ಕೆಟ್ಟ ಹೆಸರು ಬರುತ್ತದೆ, ಮತ್ತೊಂದು ಮಗುದೊಂದು ಬರುತ್ತದೆ. ಆ ಮ್ಯಾನೇಜ್‌ಮೆಂಟಿನವರೆಲ್ಲರೂ ಹೊಡೆದುಕೊಂಡು ತಿನ್ನುತ್ತಾರೆಂಬ ಅಪಪ್ರಚಾರವೆಲ್ಲ ಆಗುತ್ತದೆ. ಅದಕ್ಕೆ ದಯವಿಟ್ಟು ಅವಕಾಶವನ್ನು ಕೊಡದೆ ಸರ್ಕಾರದ ಪತಿಯಿಂದ ನಡೆಯುತ್ತಿರತಕ್ಕಂಥ ಹಾಸ್ಟೆಲ್‌ಗಳಿಗೆ ಕೊಡತಕ್ಕಂಥ ವೇತನವನ್ನು ಇವರಿಗೂ ಕೊಡಬೇಕೆಂದು ಮತ್ತೊಮ್ಮೆ ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಮನೋಹರ್ ಐನಾಪುರ್:– ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ಮಾನ್ಯ ಸಚಿವರ ಗಮನವನ್ನು ಮತ್ತೊಂದು ಸಾರಿ ಸೆಳೆಯುತ್ತೇನೆ. ಏನೆಂದರೆ 125–100–75 ರೂಪಾಯಿ ಕೊಡುತ್ತಿರುವ ಬಗ್ಗೆ ನಮ್ಮ ಹತ್ತಿರ ಹೇಳಿದೆ ಅದು ಒಂದು ದಿವಸಕ್ಕೆ ಮೂರು ರೂಪಾಯಿ, ಎರಡು ರೂಪಾಯಿ ಆಗುತ್ತದೆಂದು. ಇದನ್ನು ನೋಡಿದರೆ ನಮಗೆ ಬಹಳ ಅಸಹ್ಯವೆನಿಸುತ್ತದೆ. ಮಾನ್ಯ ಸಚಿವರು ಕೇವಲ 793 ಹಾಸ್ಟೆಲ್ ಸಿಬ್ಬಂದಿಯವರಿಗೆ ಕೊಡಬೇಕಾದುದು ಸುಮಾರು ಒಂದು ಕೋಟಿ ರೂಪಾಯಿಯಾಗುತ್ತದೆ. ಅದನ್ನು ಏತಕ್ಕೆ ಕೊಡಬಾರದು ? ಒಂದು ಕೋಟಿ ರೂಪಾಯಿ ಸರ್ಕಾರಕ್ಕೆ ಏನೂ ಬಹಳವಾಗುವುದಿಲ್ಲ. ಅದೂ ಏನು ಪರಿಶಿಷ್ಟ ಜಾತಿಯವರಿಗೋಸ್ಕರ. ದಯವಿಟ್ಟು ಮಾನ್ಯ ಸಚಿವರು ಇದನ್ನು ಒಪ್ಪಿಕೊಳ್ಳಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್:– ಮಾನ್ಯ ಅಧ್ಯಕ್ಷರೇ, ನಾವು ಈಗಾಗಲೇ 293 ಹಾಸ್ಟೆಲ್‌ಗಳಿಗೆ ಕೊಡತಕ್ಕಂಥ ಹಣ 3 ಕೋಟಿ 71 ಲಕ್ಷ ರೂಪಾಯಿಗಳು. ಬೋರ್ಡಿಂಗ್ ಚಾರ್ಜಸ್‌ನಲ್ಲಿ ಏನೂ ತಾರತಮ್ಯ ಮಾಡಿಲ್ಲ. ತಮಗೆ ಕೊಡುತ್ತಿದ್ದೇವೆ; ಉಳಿದದ್ದು ಸಿಬ್ಬಂದಿ ಮೇಲೆ ಖರ್ಚು ಮಾಡತಕ್ಕಂಥದ್ದು ಸಿಬ್ಬಂದಿ ಮೇಲೆ ಕೊಡತಕ್ಕಂಥ ಆದೇಶವನ್ನು 1972ರಲ್ಲಿಯೇ ಕೊಟ್ಟಿದ್ದೇವೆ. ಅದರಲ್ಲೂ ಕೂಡ ಸ್ವಲ್ಪ ಏನಾದರೂ ಪರಿಶೀಲನೆ ಮಾಡಬೇಕೆಂಬುದು ತಮ್ಮ ಕಳಕಳಿ ಇದೆ. ಅದರ ಬಗ್ಗೆ ಸರ್ಕಾರ ವಿಚಾರ ಮಾಡುತ್ತೇವೆಂದು ಹೇಳುತ್ತೇನೆ,

12.15 ಪಿ.ಎಂ.

ನಿಯಮ 334 ರ ಮೇರೆಗೆ

ನಂಜನಗೂಡು ತಾಲ್ಲೂಕು ಗೋಡನಹಳ್ಳಿ ಗ್ರಾಮದಲ್ಲಿ 23.2.93ರಂದು ಊರಿನ ಮಾರಿ ಹಬ್ಬದ ಸಂದರ್ಭದಲ್ಲಿ ಎರಡು ಕೋಮಿನ ಮಧ್ಯೆ ನಡೆಯಿತೆನ್ನಲಾದ ಘಟನೆ

ಶ್ರೀ ಕೆ. ಸಿದ್ದಯ್ಯ:– ಮಾನ್ಯ ಅಧ್ಯಕ್ಷರೇ, ನಂಜನಗೂಡು ತಾಲ್ಲೂಕು ಗೋಡನಹಳ್ಳಿ ಗ್ರಾಮದಲ್ಲಿ ತಾ. 23-2-1993ರಂದು ಆ ಊರಿನ ಮಾರಿ ಹಬ್ಬದ ಸಂದರ್ಭದಲ್ಲಿ ಎರಡು ಕೋಮಿನ ಮಧ್ಯೆ ನಡೆಯಿತೆನ್ನಲಾದ ಘಟನೆಯಲ್ಲಿ ಮನೆಗಳು ಮತ್ತು ಹುಲ್ಲಿನ ಮೆದೆಗಳು ಸುಟ್ಟುಹೋಗಿ ಒಂದು ಕೋಮಿನ ಜನರು ಪೊಲೀಸ್‌ನವರ ಮೇಲೆಯೇ ಖಾರದಪುಡಿಯನ್ನು ಎರಚಿ ಮಾರಕ ಆಯುಧಗಳಿಂದ ಧಾಳಿ ನಡೆಸಿ ಪೊಲೀಸ್‌ನವರೊಬ್ಬರಿಗೆ ಗಾಯಗೊಳಿಸಿ ಆಸ್ಪತ್ರೆಗೆ ಸೇರಿಸಿತೆನ್ನಲಾಗಿದೆ. ಇದಕ್ಕಿಂತ ಹಿಂದೆಯೇ ಒಂದು ಸಂದರ್ಭದ ದುರಂತದ ಘಟನೆಯೊಂದು ಈ ತಾಲ್ಲೂಕಿನ ಅಂಚಿಪುರದ ಗ್ರಾಮದಲ್ಲಿ ನಡೆದಿರುವುದರಿಂದ ಈ ಬಗ್ಗೆ ಸರ್ಕಾರದವರು ಒಂದು ಹೇಳಿಕೆಯನ್ನು ನೀಡಬೇಕೆಂದು ಕೋರುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ:– (ಕಾರ್ಮಿಕ ಸಚಿವರು) ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳಿಗೆ ತಿಳಿಸಿ ತ್ವರಿತ ಕ್ರಮ ತೆಗೆದುಕೊಳ್ಳುವಂತೆ ಹೇಳುತ್ತೇನೆ.

2. ಮುಳಬಾಗಿಲು ಪಿ.ಸಿ.ಎ.ಆರ್.ಡಿ. ಬ್ಯಾಂಕಿನ ವಿಫಲ ಭಾವಿಗಳ ಬಿಲ್ ಪಾವತಿ

ಶ್ರೀ ಎಂ.ವಿ. ವೆಂಕಟಪ್ಪ:– ಮಾನ್ಯ ಅಧ್ಯಕ್ಷರೇ, ಮುಳಬಾಗಿಲು ಪಿ.ಸಿ.ಎ.ಆರ್.ಡಿ. ಬ್ಯಾಂಕಿನ ವಿಫಲ ಭಾವಿಗಳ ಬಗ್ಗೆ.

1) ತಾರೀಖು 19-3-1992ರಂದು 92 ಪ್ರಕರಣಗಳು ಮತ್ತು ತಾರೀಖು 8-12-92 ರಂದು 39 ಪ್ರಕರಣಗಳನ್ನು ಕೋಲಾರ ಜಿಲ್ಲಾಧಿಕಾರಿಗಳಿಂದ ರಿಜಿಸ್ಟ್ರಾರ್, ಸಹಕಾರ ಸಂಘಗಳ ಇಲಾಖೆ,